# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –175 ಅಶೋಕ ಸ್ಥಂಭ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಅಶೋಕ ಸ್ಥಂಭ ವಾರ್ಡ್–175 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆಮೇರೆಗೆ ದಿನಾಂಕ:12/10/2022 ಬುದವಾರದಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ಧರ್ಮಸಿಂಗ್ ಚತ್ರುನಾಯಕ್ ಕಾರ್ಯದರ್ಶಿ.
3. ಶ್ರೀ. ಮೂರ್ತಿ, ಸಹಾಯಕ ಅಭಿಯಂತರರು, ವಿದ್ಯುತ್–ದಕ್ಷಿಣ.
4. ಶ್ರೀಮತಿ. ಶ್ರೀಜಾ ಎಸ್. ಸಹಾಯಕ ಅಭಿಯಂತರರು, ಬೆಂ.ನೀ.ಸ & ಒ.ಮಂಡಳಿ
5. ಶ್ರೀ. ರವಿಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
6. ಶ್ರೀ. ವಿಜಯಕುಮಾರ್, ಕಿರಿಯ ಆರೋಗ್ಯ ಪರಿವೀಕ್ಷಕರು.
7. ಶ್ರೀ. ಜಿ.ಟಿ. ಬೊಮ್ಮೇಗೌಡ, ಕೆಲಸ ಪರಿವೀಕ್ಷಕರು ವಾರ್ಡ್–175.
8. ಶ್ರೀ. ಮಹದೇವಯ್ಯ ಎ.ಎಸ್.ಐ, ಜಯನಗರ ಸಂಚಾರ ಪೊಲೀಸ್ ಠಾಣೆ.
9. ವಾರ್ಡ್ ಸಂಖ್ಯೆ: 175ರ ಸ್ಥಳೀಯರಾದ ಡಾ|| ರಘುನಾಥ್, ಶ್ರೀ. ಸುರೇಶ್ ಹೆಚ್.ಕೆ. ಶ್ರೀ. ಅಶೋಕ್, ಶ್ರೀ. ಮಂಜುನಾಥ್, ಶ್ರೀ. ರಾಧಾಕೃಷ್ಣನ್ ಆರ್.ಎ, ಶ್ರೀ. ಸಾಧ್ವಿಕ್.

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಪೊಲೀಸ್ ಇನ್ಸ್‌ಪೆಕ್ಟರ್ ಬಸವನಗುಡಿ ಸಂಚಾರ ಮತ್ತು ಕಾನೂನು ವ್ಯವಸ್ಥೆ ಪೊಲೀಸ್ ಠಾಣೆ.
2. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಸವನಗುಡಿ ಇಲಾಖೆಯ ಅಧಿಕಾರಿಗಳು.

*********

1. ವಾರ್ಡ್–175(153) ಅಶೋಕ ಸ್ಥಂಭ ವಾರ್ಡ್‌ನ ಸಾರ್ವಜನಿಕ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:12/10/2022 ಬುದವಾರದಂದು ಬೆಳಗ್ಗೆ 3.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಟಿ. ಮರಿಯಪ್ಪ ರಸ್ತೆಯ ಮಲ್ಲಿಗೆ ಆಸ್ಪತ್ರೆ ಎದುರು ಬಸ್ ನಿಲ್ದಾಣದ ಹತ್ತಿರ ವಾಹನ ನಿಂತು ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ ಎಂದು ದೂರಿದರು. ಈ ವಿಷಯವಾಗಿ ಸಂಚಾರ ಪೊಲೀಸ್ ಠಾಣೆಯ ಅಧಿಕಾರಿಗಳೂ ಮಾತನಾಡಿ ಈಗಾಗಲೇ ಸದರಿ ಜಾಗದಲ್ಲಿ ವಾಹನದ ಮಾಲೀಕರಿಗೆ ದಂಡ ವಿಧಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ದಂಡ ವಿಧಿಸಿ ಸದರಿ ಜಾಗದಲ್ಲಿ ವಾಹನ ನಿಲ್ಲಿಸದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

**ಕ್ರಮ: ಸಂಚಾರ ಪೊಲೀಸ್ ಠಾಣೆ, ಜಯನಗರ**

3. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಟಿ. ಮರಿಯಪ್ಪ ರಸ್ತೆಯ ಪಾದಚಾರಿ ಮಾರ್ಗ ಹಾಳಾಗಿದ್ದು, ಸರಿಪಡಿಸಲು ಕೋರಿದರು. ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ವೈಟ್ ಟಾಪಿಂಗ್ ವಿಭಾಗಕ್ಕೆ ಪತ್ರ ಬರೆಯುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

**ಕ್ರಮ: ಕಾರ್ಯಪಾಲಕ ಅಭಿಯಂತರರು ವೈಟ್ ಟಾಪಿಂಗ್**

4. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಹಾಗೂ ಸ್ಥಳಿಯರು ಮಾತನಾಡಿ ಟಿ. ಮರಿಯಪ್ಪ ರಸ್ತೆಯಲ್ಲಿ ಮಳೆನೀರು ಚರಂಡಿಯಲ್ಲಿ ಹರಿಯದೇ ರಸ್ತೆಯ ಮೇಲೆ ನಿಂತು ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ವೈಟ್ ಟಾಪಿಂಗ್ ವಿಭಾಗಕ್ಕೆ ಕೂಡಲೇ ಕ್ರಮ ವಹಿಸಲು ಕೋರಿ ಪತ್ರ ಬರೆಯುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

**ಕ್ರಮ: ಕಾರ್ಯಪಾಲಕ ಅಭಿಯಂತರರು ವೈಟ್ ಟಾಪಿಂಗ್**

5. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ 2ನೇ ಬ್ಲಾಕ್ ಜಯನಗರ 9ನೇ ಮುಖ್ಯರಸ್ತೆಯಲ್ಲಿರುವ ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರ ಆಸ್ಪತ್ರೆಯು ಸೀಲಿಂಗ್ ಹಾಳಾಗಿದ್ದು, ದುರಸ್ಥಿಪಡಿಸುವಂತೆ ಕೋರಿದರು. ನೋಡಲ್ ಅಧಿಕಾರಿಯವರು ಮಾತನಾಡಿ ಕೂಡಲೇ ಆಸ್ಪತ್ರೆಯ ಕಟ್ಟಡವನ್ನು ಪರಿಶೀಲಿಸಿ ದುರಸ್ಥಿ ಕಾರ್ಯ ಕೈಗೊಳ್ಳುವ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು**

6. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಕುಟ್ಟಿ ಕಾಲೋನಿಯಲ್ಲಿ ಒಳಚರಂಡಿ ಚೇಂಬರ್ ಹಾಳಾಗಿರುವ ಬಗ್ಗೆ ಹಾಗೂ ಮಳೆನೀರು ಇಂಗು ಗುಂಡಿಯನ್ನು ಸರಿಪಡಿಸುವಂತೆ ಕೋರಿದರು. ನೋಡಲ್ ಅಧಿಕಾರಿಯವರು ಮಾತನಾಡಿ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

ಕ್ರಮ : ವಾರ್ಡ್ ಅಭಿಯಂತರರು

7. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ 10ನೇ "ಸಿ" ಮುಖ್ಯರಸ್ತೆ ಜಯನಗರ 1ನೆ ಬಡಾವಣೆಯಲ್ಲಿ ಮರದ ರೆಂಬೆಗಳು ಬಿದ್ದಿದ್ದು ತೆರವುಗೊಳಿಸುವಂತೆ ಕೋರಿದರು. ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ವಹಿಸಲು ತಿಳಿಸುವುದಾಗಿ ಸಭೆಯಲ್ಲಿ ಉತ್ತರಿಸಿದರು.

ಕ್ರಮ : ಉಪ ಅರಣ್ಣ ಸಂರಕ್ಷಣಾಧಿಕಾರಿಗಳು (ದಕ್ಷಿಣ)

8. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ವಾರ್ಡ್ 175ರ ವ್ಯಾಪ್ತಿಯಲ್ಲಿ ಅಲ್ಲಲ್ಲಿ ಓ.ಎಫ್.ಸಿ ಕೇಬಲ್‌ಗಳು ನೇತಾಡುತ್ತಿದ್ದು, ತೆರವುಗೊಳಿಸಲು ಕೋರಿದರು. ನಿನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ವಹಿಸಲು ತಿಳಿಸುವುದಾಗಿ ಸಭೆಯಲ್ಲಿ ಉತ್ತರಿಸಿದರು.

ಕ್ರಮ : ವಾರ್ಡ್ ಅಭಿಯಂತರರು

9. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಬೈರಸಂದ್ರ ಮುಖ್ಯರಸ್ತೆಯಲ್ಲಿ ವಿದ್ಯುತ್ ಕಂಬ ಹಾಳಾಗಿದ್ದು, ಬದಲಾಯಿಸುವಂತೆ ಕೋರಿದರು. ನೋಡಲ್ ಅಧಿಕಾರಿಯವರು ಮಾತನಾಡಿ ಬೆಸ್ಕಾಂ ಇಲಾಖೆಯವರು ಸಭೆಗೆ ಗೈರುಹಾಜರಾಗಿರುವುದರಿಂದ ಈ ಬಗ್ಗೆ ಮುಂದಿನ ಸಭೆಯಲ್ಲಿ ಕ್ರಮ ವಹಿಸಲು ನಿರ್ದೇಶನ ನೀಡುವುದಾಗಿ ಸಭೆಯಲ್ಲಿ ತಿಳಿಸಿದರು.

ಕ್ರಮ : ಬೆಸ್ಕಾಂ ಇಲಾಖೆ

10. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಆರ್ಮುಗಂ ವೃತ್ತದಲ್ಲಿ ಇರುವ ಪಾರ್ಕ್‌ನ್ನು ಸ್ವಚ್ಛಗೊಳಿಸಲು ಕೋರಿದರು. ವಾರ್ಡ್ ಅಭಿಯಂತರರು ಮಾತನಾಡಿ ಆರ್ಮುಂಗ ವೃತ್ತ ಚಿಕ್ಕಪೇಟೆ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.

11. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಮಹಾಬೋದಿ ಆಸ್ಪತ್ರೆಯ ಉದ್ದಿಮೆ ಪರವಾನಗಿ ಹಾಗೂ ಆಸ್ಪತ್ರೆಯ ಸ್ವತ್ತಿನ ವಿವರ ನೀಡುವಂತೆ ಕೋರಿದರು. ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರಿಂದ ಮಾಹಿತಿ ಪಡೆದು ಒದಗಿಸುವುದಾಗಿ ತಿಳಿಸಿದರು.

ಕ್ರಮ : ಕಂದಾಯ ಇಲಾಖೆ

12. ವಾರ್ಡಿನ ಸ್ಥಳೀಯರಾದ ಶ್ರೀ. ಅಶೋಕ್ ರವರು ಮಾತನಾಡಿ ಮಲ್ಲಿಗೆ ಆಸ್ಪತ್ರೆ ಪಾಲಿಕೆಯ ಸ್ವತ್ತಾಗಿದ್ದು, ಅನಧಿಕೃತವಾಗಿ ವಾಹನಗಳನ್ನು ಪಾರ್ಕಿಂಗ್ ಮಾಡಿರುವುದಾಗಿ ದೂರಿದರು. ಈ ಸಂಬಂಧ ಸಂಚಾರ ಪೊಲೀಸ್ ಠಾಣೆಯ ಅಧಿಕಾರಿಗಳು ಮಾತನಾಡಿ ಈಗಾಗಲೇ ಸದರಿ ಜಾಗದಲ್ಲಿ ವಾಹನದ ಮಾಲೀಕರಿಗೆ ದಂಡ ವಿಧಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ದಂಡ ವಿಧಿಸಿ ಸದರಿ ಜಾಗದಲ್ಲಿ ವಾಹನ ನಿಲ್ಲಿಸದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಕ್ರಮ:: ಸಂಚಾರಿ ಪೊಲೀಸ್ ಠಾಣೆ, ಜಯನಗರ

13. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಎಂ.ಎನ್. ಕೃಷ್ಣರಾವ್ ಪಾರ್ಕ್‌ನಲ್ಲಿ ಸ್ವಚ್ಛಗೊಳಿಸುವ ಬಗ್ಗೆ ಪ್ರಸ್ತಾಪಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಎಂ.ಎನ್. ಕೃಷ್ಣರಾವ್ ಪಾರ್ಕ್‌ನಲ್ಲಿ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ಸಭೆಯಲ್ಲಿ ತಿಳಿಸಿದರು.

14. ವಾರ್ಡಿನ ಸ್ಥಳೀಯರಾದ ಶ್ರೀ. ಸಿ.ಎನ್. ಕುಮಾರ್ ರವರು ಮಾತನಾಡಿ ಜಯನಗರ 1ನೇ ಬ್ಲಾಕ್‌ನ 4ನೇ ಅಡ್ಡರಸ್ತೆಯಲ್ಲಿ ಎರಡೂ ಕಡೆ ವಾಹನ ನಿಲ್ಲಿಸುತ್ತಿದ್ದು, ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸಂಚಾರ ಪೊಲೀಸ್ ಠಾಣೆ, ಜಯನಗರ ರವರು ಮಾತನಾಡಿ ಈ ಬಗ್ಗೆ ಚರ್ಚಿಸಿ ಮುಂದಿನ ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಕ್ರಮ:: ಸಂಚಾರಿ ಪೊಲೀಸ್ ಠಾಣೆ, ಜಯನಗರ

15. ವಾರ್ಡಿನ ಸ್ಥಳೀಯರಾದ ಶ್ರೀ. ಸಿ.ಎನ್. ಕುಮಾರ್ ರವರು ಮಾತನಾಡಿ ಜಯನಗರ 1ನೇ ಬ್ಲಾಕ್‌ನಲ್ಲಿ ಕಸ ವಿಲೇವಾರಿ ವಾಹನಗಳು ನಿಗಧಿತ ಸಮಯಕ್ಕೆ ಬರದೆ ತೊಂದರೆಯಾಗಿರುವುದಾಗಿ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಈ ಬಗ್ಗೆ ಕೂಡಲೇ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಕ್ರಮ: ಘನತ್ಯಾಜ್ಯ ವಿಭಾಗ

16. ವಾರ್ಡಿನ ಸ್ಥಳೀಯರಾದ ಶ್ರೀ. ಅಶೋಕ್ ರವರು ಮಾತನಾಡಿ ಅಶೋಕ ಪಿಲ್ಲರ್ ಸುತ್ತಮುತ್ತ ಇರುವ ಪಾದಚಾರಿ ರಸ್ತೆಯಲ್ಲಿ ನೆಡಲಾಗಿರುವ ಗಿಡಗಳ ಮೇಲ್ವಿಚಾರಣೆ ಸಮರ್ಪಕವಾಗಿ ಮಾಡುವಂತೆ ಕೋರಿದರು. ನೋಡಲ್ ಅಧಿಕಾರಿಯವರು ಮಾತನಾಡಿ ತೋಟಗಾರಿಕೆ ಇಲಾಖೆಯವರಿಗೆ ಈ ಬಗ್ಗೆ ಸೂಚನೆ ನೀಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ತೋಟಗಾರಿಕೆ ಇಲಾಖೆ**

17. ವಾರ್ಡಿನ ಸ್ಥಳೀಯರಾದ ಶ್ರೀ. ಹನುಮಂತೇಗೌಡ ರವರು ಮಾತನಾಡಿ ಮಾಧವನ್ ಪಾರ್ಕ್ ಸರ್ಕಲ್‌ನಲ್ಲಿ ಲಾ-ಮಾರ್ಟ್ವೆಲ್ಲಾ ಹೋಟೆಲ್‌ನವರು ಶುಚಿತ್ವ ಕಾಪಾಡಿರುವುದಿಲ್ಲ ಎಂದು ದೂರಿದರು. ತೋಟಗಾರಿಕೆ ಇಲಾಖೆಯವರಿಗೆ ಈ ಬಗ್ಗೆ ಸೂಚನೆ ನೀಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ತೋಟಗಾರಿಕೆ ಇಲಾಖೆ**

18. ವಾರ್ಡಿನ ಸ್ಥಳೀಯರಾದ ಶ್ರೀ. ಹನುಮಂತೇಗೌಡ ರವರು ಮಾತನಾಡಿ ಮಾಧವನ್ ಪಾರ್ಕ್ ಹತ್ತಿರ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸಲು ಯಾರು ಅನುಮತಿ ನೀಡಿರುವುದಾಗಿ ಪ್ರಶ್ನಿಸಿದರು. ವಾರ್ಡಿನ ಅಭಿಯಂತರರು ಮಾತನಾಡಿ ಸಂಬಂಧಪಟ್ಟಂತೆ ಪಾಲಿಕೆಯ ಕಛೇರಿಯಲ್ಲಿ ಸಂಪೂರ್ಣ ದಾಖಲಾತಿ ಲಭ್ಯವಿದ್ದು ಒದಗಿಸಲಾಗುವುದೆಂದು ತಿಳಿಸಿದರು.

**ಕ್ರಮ: ತೋಟಗಾರಿಕೆ ಇಲಾಖೆ**

19. ವಾರ್ಡಿನ ಸ್ಥಳೀಯರಾದ ಶ್ರೀ. ಹನುಮಂತೇಗೌಡ ರವರು ಮಾತನಾಡಿ 2ನೇ ಬ್ಲಾಕ್ ಜಯನಗರ 7ನೇ ಮುಖ್ಯರಸ್ತೆಯಲ್ಲಿ ಡಾಂಬರೀಕರಣ ಮಾಡಿರುವ ರಸ್ತೆಯು ಹಾಳಾಗಿರುವ ಬಗ್ಗೆ ದೂರಿದರು. ವಾರ್ಡಿನ ಅಭಿಯಂತರರು ಮಾತನಾಡಿ ಸಂಬಂಧಪಟ್ಟಂತೆ ಯೋಜನೆ (ದಕ್ಷಿಣ) ರವರ ಕಛೇರಿಗೆ ಈ ಬಗ್ಗೆ ವರದಿ ಸಲ್ಲಿಸಿ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ತೋಟಗಾರಿಕೆ ಇಲಾಖೆ**

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ಧಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(signature) 14/10/22
(ಧರ್ಮಸಿಂಗ್ ಚತ್ರುನಾಯಕ್)
ಕಾರ್ಯದರ್ಶಿ
ವಾರ್ಡ್-175 ಅಶೋಕ ಸ್ಥಂಭ

(signature)
(ವರಲಕ್ಷ್ಮಮ್ಮ ಎಲ್)
ನೋಡಲ್ ಅಧಿಕಾರಿ
ವಾರ್ಡ್-175 ಅಶೋಕ ಸ್ಥಂಭ